# ಕನ್ನಡ ಕಲಾಭಿಮಾನಿಗಳ ಮನಮುದಗೊಳಿಸಿದ ಸುಮಧುರ ಸಂಗೀತ ರಂಜನ – ಪುರಂದರ ನಮನ.



ತಾರೀಖು ೧೦ನೇ ಜುಲೈ ಬೇಸಿಂಗ್ ಸ್ಟೋಕಿನ ಕ್ವೀನ್ ಮೇರೀ ಕಾಲೇಜಿನ ಸೆಂಟ್ರಲ್ ಸ್ಟುಡಿಯೋದಲ್ಲಿ ನಡೆದ ಪುರಂದರ ನಮನ ಒಂದು ಸುಂದರ ಸ್ಮರಣೀಯ ಅನುಭವ. ಕಳೆದ ೧೦ ವರ್ಷಗಳಿಂದ ಸತತವಾಗಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿರುವ ಶ್ರೀ.ರಾಮಮೂರ್ತಿ ಮತ್ತು ಶ್ರೀಮತಿ. ಸೀತಾರಾಮಮೂರ್ತಿ ಕನ್ನಡಬಳಗದ ಅಭಿಮಾನಿಗಳಿಗೆ ಚಿರಪರಿಚಿತರು. ಕಳೆದ ವರ್ಷದಿಂದ ಈ ಸಮಾರಂಭವನ್ನು ಯು.ಕೆ.ಕನ್ನಡ ಬಳಗದ ಆಶ್ರಯದಲ್ಲಿ ನಡೆಸಲಾಗುತ್ತಿದೆ ಯೆಂಬುದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯ. ಈ ವರ್ಷದ ಈ ಕಾರ್ಯಕ್ರಮದಲ್ಲಿ ನಮ್ಮ ಸ್ಥಳೀಯ ಪ್ರತಿಭಾನ್ವಿತ ಮತ್ತು ಉದಯೋನ್ಮುಖ ಕಲಾವಿದೆಯರಾದ ಡಾ.ರಮ್ಯಾ ಮೋಹನ್ ಮತ್ತು ಶ್ರೀಮತಿ. ಶ್ರುತಿ ಸುಧೀರ್ ಹಾಡಿ ನಮ್ಮೆಲ್ಲರ ಮನ ತಣಿಸಿದರು. ಇವರಿಗೆ ಪಕ್ಕವಾದ್ಯ ನುಡಿಸಿದ ಡಾ.ಜ್ಯೋತ್ಸ್ನ ಶ್ರೀಕಾಂತ್ ಮತ್ತು ಬೆಂಗಳೂರು ಆರ್.ಎನ್.ಪ್ರಕಾಶ್ ಈ ಕಾರ್ಯಕ್ರಮಕ್ಕೆ ಇನ್ನಷ್ಟು ಮೆರಗು ನೀಡಿದರು. ಕಲಾವಿದರ ಪರಿಚಯದೊಂದಿಗೆ ಡಾ.ಉಮಾ ವೆಂಕಟೇಶ್ ಮತ್ತು ರಾಮಮೂರ್ತಿಯವರು ಈ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಡಾ.ರಮ್ಯಾ ಮೋಹನ್ ಮತ್ತು ಶ್ರುತಿ ಸುಧೀರ್ ಪುರಂದರ ದಾಸರ ದೇವರ ನಾಮಗಳನ್ನು ಉತ್ತಮ ರಾಗಗಳ ಅಳವಡಿಕೆಯಲ್ಲಿ ಬಹಳ ಸುಶ್ರಾವ್ಯವಾಗಿ ಹಾಡಿ ಸಭಿಕರನ್ನು ನಾದಲಹರಿಯಲ್ಲಿ ತೇಲಿಸಿದರಲ್ಲದೇ, ಎಲ್ಲರನ್ನು ಭಾವೋನ್ಮುಖರನ್ನಾಗಿ ಮಾಡಿದರು. ಡಾ.ಜ್ಯೋತ್ಸ್ನ ಶ್ರೀಕಾಂತ್ ತಮ್ಮ ಪಿಟೀಲಿನ ತಂತಿಗಳಲ್ಲಿ ''ಜಗದೋದ್ಧಾರನ ಆಡಿಸಿದಳೆ ಯಶೋಧ '' ದೇವರನಾಮದ ಪದಗಳನ್ನು ನಮ್ಮೆಲ್ಲರ ಮನದಲ್ಲಿ ಪೂರ್ಣವಾಗಿ ಮನಮೂಡಿಸುವುದರಲ್ಲಿ ಯಶಸ್ವಿಯಾದರು. ಕೇವಲ ದಾಸರ ಪದಗಳಲ್ಲದೇ, ಶ್ರುತಿ ಸುಧೀರ್, ಬಸವಣ್ಣ ಮತ್ತು ಅಕ್ಕಮಹಾದೇವಿಯ ಮನೋಹರ ವಚನಗಳನ್ನು ಹಾಡಿ ನಮ್ಮೆಲ್ಲರನ್ನೂ



ಸಮುಯದ ಅರಿವಿಲ್ಲದಂತೆ ಪೂರ್ಣವಾಗಿ ಮೋಡಿಮಾಡಿದರು. ಬೆಂಗಳೂರಿನ ಆರ್.ಎನ್.ಪ್ರಕಾಶ್. ತಮ್ಮ ಮೃದಂಗ ಕೈಚಳಕದ ಉತ್ತಮ ಪರಿಚಯ ನೀಡಿದರು.

ಸಂಗೀತವಾದಮೇಲೆ, ಬೆಂಗಳೂರಿನಿಂದ ಆಗಮಿಸಿದ ಡಾ.ಬಾಲಸುಬ್ರಹ್ಮಣ್ಯಂ, ಕರ್ನಾಟಕ ರಾಜ್ಯದಲ್ಲಿ ತಮ್ಮ ಸಂಸ್ಥೆ, ಗಿರಿಜನೋದ್ಧಾರಕ್ಕಾಗಿ ಮಾಡುತ್ತಿರುವ ಅನೇಕ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಉತ್ತಮ ಮಾಹಿತಿ ನೀಡಿದರಲ್ಲದೇ, ಬ್ರಿಟಿಷ್ ಸಮುದಾಯ ದ್ವೀಪಗಳಲ್ಲಿನ ಅನಿವಾಸಿ ಕನ್ನಡಿಗರು ಈ ಕಾರ್ಯಕ್ರಮಗಳಲ್ಲಿ ಹೇಗೆ ಸಹಯೋಗ ನೀಡಿ ಅವರ ಏಳಿಗೆಯಲ್ಲಿ ಮಹತ್ವ ಪಾತ್ರ ವಹಿಸಬಹುದೆಂಬ ಉತ್ತಮ ಸಲಹೆಗಳನ್ನು ನೀಡಿದರು. ಸೀತಾ ರಾಮಮೂರ್ತಿಯವರ ಸವಿಯಾದ ಪುಳಿಯೋಗರೆಯನ್ನು ಸವಿದು, ಕನ್ನಡ ಚಲನ ಚಿತ್ರ ” ಕ್ರೇಜಿ ಕುಟುಂಬ ” ಚಲನಚಿತ್ರದ ಹಾಸ್ಯವನ್ನೂ ಅನುಭವಿಸಿ ನಮ್ಮನಮ್ಮ ಊರುಗಳನ್ನು ತಲುಪಿದೆವು. ಒಟ್ಟಿನಲ್ಲಿ ಈ ಕಾರ್ಯಕ್ರಮ ನಮ್ಮೆಲ್ಲರ ಮನಸ್ಸಿನಲ್ಲಿ ಬಹಳದಿನ ಹಸಿರಾಗಿ ಉಳಿಯುವುದರಲ್ಲಿ ಯಾವ ಸಂದೇಹವೂ ಇಲ್ಲ. ಕನ್ನಡ ಬಳಗ ಯು.ಕೆ ಇನ್ನೂ ಹಲವಾರು ಇಂತಹ ಕನ್ನಡ ಸಂಸ್ಕೃತಿ ಮತ್ತು ಸಂಗೀತಗಳ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಲಿ ಎಂಬುದೇ ನಮ್ಮೆಲ್ಲರ ಆಶಯ.



ಇಂತಿ ತಮ್ಮ ವಿಶ್ವಾಸಿ.

ಡಾ.ಉಮಾ ವೆಂಕಟೇಶ್.